ಕಮಾಂಡೋ ತಂಡಗಳನ್ನು ನಿಯೋಜಿಸುವುದು

98(77) ಶ್ರೀ ಮೋಹಿಯುದ್ದೀನ್ ಬಾವ. ಬಿ.ಎ. :– ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೆ:–

(ಅ) ಸಮಾಜ ವಿರೋಧಿ ಚಟುವಟಿಕೆಗಳ ನಿಯಂತ್ರಣ ಹಾಗೂ ನಿವಾ ರಣೆಗಾಗಿ ಪ್ರತಿ ಜಿಲ್ಲೆಗಳಲ್ಲಿ ಕಮಾಂಡೋ ತಂಡಗಳನ್ನು ನಿಯೋಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಪ್ರಸ್ತಪನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು) :–

(ಅ) ಇರುವುದಿಲ್ಲ, ಆದಾಗ್ಯೂ ಆಂತರಿಕ ಭದ್ರತಾ ವಿಭಾಗದ ಸಿಸಿಟಿ ಘಟಕದಿಂದ ಜಿಲ್ಲಾವಾರು ಪೊಲೀಸ್ ಸಿಬ್ಬಂದಿಗಳಿಗೆ D-SWAT (District Special Weapons and Tactics Scheme) .ತರಬೇತಿ ನೀಡಲಾಗುತ್ತಿದೆ.

(ಆ) ಅನ್ವಯಿಸುವುದಿಲ್ಲ.

ಬಂಗಾರಪೇಟೆ ಕ್ಷೇತ್ರಕ್ಕೆ ಪಶು ಆಸ್ಪತ್ರೆ ನಿರ್ಮಾಣ

100(81) ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ) :–ಮಾನ್ಯ ಕಾನೂನು, ನ್ಯಾಯ,, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಹಾಗೂ ಪಶುಸಂಗೋಪನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೆ:–

(ಅ) ಬಂಗಾರಪೇಟೆ ಕ್ಷೇತ್ರದಲ್ಲಿ ಶೇ.80 ರಷ್ಟು ರೈತರು ಹೈನುಗಾರಿಕೆ ಅವಲಂಬಿಸಿದ್ದು, ಬಹುತೇಕ ಕಡೆ ಪಶು ಆಸ್ಪತ್ರೆಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ 2012–13, 2013–14 ನೇ ಸಾಲಿಗೆ ಎಷ್ಟು ಆಸ್ಪತ್ರೆಗಳನ್ನು ಯಾವ ಯಾವ ಸ್ಥಳಗಳಲ್ಲಿ ತೆರೆಯಲಾಗುವುದು ಮತ್ತು ಅದರ ಅಂದಾಜು ಮೊತ್ತ ಎಷ್ಟು ;

(ಇ) ಹಾಗಿಲ್ಲದಿದ್ದಲ್ಲಿ, ಮಂಜೂರು ಮಾಡದೇ ಇರಲು ಕಾರಣವೇನು ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನಾ ಸಚಿವರು):–

(ಅ) ಬಂಗಾರಪೇಟೆ ತಾಲ್ಲೂಕಿನಲ್ಲಿ ಒಟ್ಟು 80.665 ಜಾನುವಾರು ಘಟಕಗಳಿದ್ದು, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನ ಅನ್ವಯ ಪ್ರತಿ 5,000 ಜಾನುವಾರು ಘಟಕಗಳಿಗೆ ಒಂದರಂತೆ ಒಂದು ಪಶುವೈದ್ಯರ ನೇತೃತ್ವದ ಪಶುಚಿಕಿತ್ಸಾಲಯ ಇರಬೇಕಾಗಿದ್ದು, ಆ ಮೇರೆಗೆ 16 ಪಶುವೈದ್ಯ ಸಂಸ್ಥೆಗಳ ಅಗತ್ಯತೆ ಇರುತ್ತದೆ. ಬಂಗಾರಪೇಟೆ ತಾಲ್ಲೂಕಿನಲ್ಲಿ 19 ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿರುತ್ತವೆ.

(ಆ) 2012–13, 2013–14 ನೇ ಸಾಲಿನಲ್ಲಿ ಯಾವುದೇ ಪಶುವೈದ್ಯ ಸಂಸ್ಥೆಗಳನ್ನು ತೆರೆಯಲಾಗಿರುವುದಿಲ್ಲ.

(ಇ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನ ಅನ್ವಯ ಪ್ರತಿ 5,000 ಜಾನುವಾರು ಘಟಕಕ್ಕೆ ಒಂದು ಪಶುವೈದ್ಯ ಸಂಸ್ಥೆಯು ಇರಬೇಕಾಗಿದ್ದು, ಆ ಮೇರೆಗೆ 16 ಪಶುವೈದ್ಯ ಸಂಸ್ಥೆಗಳ ಅಗತ್ಯತೆ ಇರುತ್ತದೆ. ಬಂಗಾರಪೇಟೆ ತಾಲ್ಲೂಕಿನಲ್ಲಿ ಈಗಾಗಲೇ 19 ವಿವಿಧ ಹಂತದ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ.

ಪೊಲೀಸ್ ಠಾಣೆ ಮಂಜೂರು

102(233) ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ) :–ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಂಗಾರಪೇಟೆ ಕ್ಷೇತ್ರದ ಬೂದಿಕೋಟೆ ಹೋಬಳಿ ಕೇಂದ್ರಕ್ಕೆ ಅರಕ್ಷಕ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಯಾವಾಗ ಹೊಸ ಠಾಣೆ ಪ್ರಾರಂಭಿಸಲಾಗುವುದು ;

(ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):–

(ಅ) ಇಲಾಖೆಯ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.